ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯ ಮಂತ್ರಿಗಳು).—ಜನಗಳು ತಾವಾಗಿಯೇ ಸಹಕಾರ ಸಂಘಗಳನ್ನು ಮಾಡಿಕೊಂಡು ಮುಂದೆ ಬಂದರೆ ಅವರಿಗೇ ವಹಿಸಿ ಕೊಡುತ್ತೇವೆ. ಆದರೆ ಅದು ಅಷ್ಟು ಯಶಸ್ವಿಯಾಗುವುದಿಲ್ಲ ಎನ್ನುವ ಅನುಮಾನ ಇರುವುದರಿಂದ ಎಲ್ಲೆಲ್ಲ ಸಾಧ್ಯವೋ ಅಲ್ಲ ಪಿ.ಡಬ್ಲ್ಯು.ಡಿ. ಇಲಾಖೆಯ ಮೂಲಕ ನಡೆಸಬೇಕು ಎಂದು ಇದೆ. ಆದರೆ ಇನ್ನೂ ಯಾವ ಒಂದು ತೀರ್ಮಾನವನ್ನೂ ಮಾಡಿಲ್ಲ.

ಶ್ರೀ ಎಸ್ ಎಂ. ಕೃಷ್ಣ.—ಪಿ.ಡಬ್ಲ್ಯು.ಡಿ. ಇಲಾಖೆಗೆ ವಹಿಸಬೇಕು ಎಂದು ಮಾಡಿದ್ದರೆ ಈಗ ಅವರು ಒದಗಿಸುತ್ತಿರುವ ಮೋಟಾರುಗಳ ರಿಪೇರಿಗಳನ್ನು ಮಾಡಲು ಯಾವ ನಿರ್ದಿಷ್ಟವಾದ ಏಜೆನ್ಸಿ ಮೂಲಕ ಮಾಡಬೇಕೆಂದು ಸರಕಾರ ಏರ್ಪಾಡು ಮಾಡಿದ್ದೀರಿ ?

ಶ್ರೀ ಎಸ್. ನಿಜಲಿಂಗಪ್ಪ.—ಈ ಪ್ರಶ್ನೆ ಬಹಳ ಅಶ್ಚರ್ಯಕರವಾಗಿದೆ. ಪಂಪುಗಳನ್ನು ನಪ್ಪೆ ಮಾಡುವಾಗ ಅದಕ್ಕೆ ಬೇಕಾಗುವ ಮೆಕ್ಯಾನಿಕ್ಕುಗಳನ್ನು ಹಾಗೂ ಇತರರನ್ನು ಆಗಲೇ ಸಿದ್ಧಗೊಳಿಸಿರುತ್ತಾರೆ.

ಶ್ರೀ ಹೆಚ್. ಡಿ. ದೇವೇಗೌಡ.—ತಾವು ಈಗಾಗಲೇ ಹೇಳಿದಂತೆ ಲಫ್ಟ್ ಇರಿಗೇಷನ್ ಸ್ಕೀಮುಗಳನ್ನು ಮಾಡುವಾಗ ಅದರ ಬೆಲೆ ಎಕರೆಗೆ ಸುಮಾರು 300 ರಿಂದ 380ರ ವರೆಗೆ ಹೋದರೂ ಅಂತಹ ಸ್ಕೀಂಗಳನ್ನು ಸರಕಾರವೇ ಮಾಡುತ್ತದೆ ಎಂದರು. ಅದರೆ ಅದೇ ರೀತಿಯಾದ ಸ್ಕೀಮುಗಳು ನಮ್ಮ ಹಾಸನ ಜಿಲ್ಲೆಯಲ್ಲಿ ಇರುವುದರಿಂದ ಅವುಗಳನ್ನು ತೆಗೆದುಕೊಳ್ಳಬಹುದು, ನಾನು ಸರಕಾರ ದವರ ಗಮನಕ್ಕೆ ಆಗಲೇ ತಂದಿದ್ದೇನೆ. ಈಗಲಾದರೂ ಇಂತಹ ಸ್ಕೀಂಗಳನ್ನು ಸರಕಾರ ಮಾಡಿ ಕೊಡುತ್ತದೆ ಎನ್ನುವ ಆಶ್ವಾಸನೆಯನ್ನು ಇಲ್ಲಿ ಕೊಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ನಾನು ಹಾಸನ ಜಿಲ್ಲೆಗೆ ಹೋಗಿ ನೋಡಿಕೊಂಡು ಬಂದಿದ್ದೇನೆ. ಅಲ್ಲಿ ಲಫ್ಟ್ ಇರಿಗೇಷನ್ನು ಮೂಲಕ ನೀರು ಎತ್ತಿ ಕೊಡಬೇಕಾದರೆ ಸುಮಾರು 90 ಅಡಿ ಎತ್ತರದಿಂದ ನೀರನ್ನು ಎತ್ತಿ ಕೊಡಬೇಕು. ಇದಕ್ಕಾಗಿ ಸುಮಾರು 300 ರೂಪಾಯಿಗಳಿಗಿಂತ ಹೆಚ್ಚು ಖರ್ಚು ಬರಬಹುದು. ಆದರೆ ಖರ್ಚು ಜಾಸ್ತಿ ಬಂತು ಎಂದು ಸರಕಾರ ಮಾಡುವ ಕೆಲಸವನ್ನು ನಿಲ್ಲಿಸುವುದಿಲ್ಲ. ಸರಕಾರ ವಹಿಸಿಕೊಂಡ ಮೇರೆ ಅದನ್ನು ಮಾಡಲೇಬೇಕಾಗುತ್ತದೆ: ಅದುದರಿಂದ ಕರಾರುವಾಕ್ಕಾಗಿ ಇಷ್ಟೇ ವೆಚ್ಚದಲ್ಲಿ ಮಾಡಬೇಕೆಂದು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಜನರಿಗೆ ಎಲ್ಲಿಂದಲಾದರೂ ಸರಿಯೇ ನೀರನ್ನು ಒದಗಿಸಿ ಅವರುಗಳು ಚೆನ್ನಾಗಿ ವ್ಯವಸಾಯ ಮಾಡಲು ಅನು ಕೂಲಗಳನ್ನು ಮಾಡಿಕೊಡುವುದು ಸರಕಾರದ ಉದ್ದೇಶವಾಗಿದೆ. ಸರಕಾರ 350 ರೂಪಾಯಿಗಳಿಗೇ ಆಗಲಲ್ಲ ಎಂದು ಕೆಲಸವನ್ನು ನಿಲ್ಲಿಸುವುದಿಲ್ಲ.

Enhancement of Pay Scales of Government Servants.

(*Q.—295) Smt. SUSHILABAI HIRACHAND SHAH (Bagewadi).—

Will the Government be pleased to state :—

(*a*) whether the Pay Committee appointed recently to consider the question of enhancement of Pay Scals of Government servents has submitted its report ;

(*b*) if so, whether any recommendation has been made by the committee to enhance the Pay Scales of Doctors ;

(*c*) the action they have taken to give effect to the recommendation ?

A.—SRI RAMAKRISHNA HEGDE (Minister for Finance).—

(*a*) No.
(*b*) and (*c*) Do not arise.

ಶ್ರೀಮತಿ ಸುಶೀಲಾಬಾಯಿ ಹಿರಾಚಂದ್‌ಷಾ.—ಸರಕಾರದವರು ಮಾಡಿದ ಪೇ ಕಮಿಟಿ ರಿಪೋರ್ಟು ಎರಡು ವರ್ಷಗಳಾದರೂ ಇನ್ನೂ ಏಕೆ ಬರಲಿಲ್ಲ ?

ಶ್ರೀ ರಾಮಕೃಷ್ಣ ಹೆಗಡೆ.—ಈ ಹೇ ಕಮಿಟಿಯವರು ಇನ್ನೂ ಸರಕಾರಕ್ಕೆ ಅವರ ರಿಪೋರ್ಟು ಕಳುಹಿಸಿಲ್ಲ.

ಶ್ರೀಮತಿ ಸುಶೀಲಾಬಾಯಿ ಪಿರಾಚಂದ್‌ಷಾ.—ಈ ಹೇ ಕಮಿಟಿ ರಿಪೋರ್ಟು ಇನ್ನೂ ಬಾರದೇ ಇರುವುದರಿಂದ ಎಷ್ಟೋ ಜನ ಡಬ್ಬಲ್ ಗ್ರಾಜುಯೇಟುಗಳಿಗೆ ಅನ್ಯಾಯವಾಗುತ್ತಿದೆ ಮತ್ತು ಇತರ ಜನಕ್ಕೂ ತೊಂದರೆಯಾಗುತ್ತಿದೆ ಎನ್ನುವುದು ಸರಕಾರಕ್ಕೆ ತಿಳಿಯಬಂದಿಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ಅ ತರಹ ಯಾವ ಅನ್ಯಾಯವೂ ಆಗುವುದಿಲ್ಲ. 1956ನೇ ಇಸವಿಯಿಂದೀಚೆಗೆ ಎರಡು ಸಲ್ಲ ಹೇ ರಿವಿಷನ್ನು ಮಾಡಿದ್ದೇವೆ ಮತ್ತು ಐದು ಸಲ ಡಿಯರ್‌ನೆಸ್ ಅಲೋಯನ್ಸು ಹಾಗೂ ಇನ್ನಿತರ ಅಲೋಯನ್ಸುಗಳನ್ನು ರಿವಿಜನ್ನು ಮಾಡಿದ್ದೇವೆ. ಈ ಕಮಿಟಿಯನ್ನು ರಚನೆ ಮಾಡಿರುವುದರ ಉದ್ದೇಶ ಸರ್ವೇ ಸಾಮಾನ್ಯವಾಗಿ ಎಲ್ಲರಿಗೂ ಯಾವ ರೀತಿಯಾದ ರಿವಿಜನ್ನು ಮಾಡಬೇಕು ಎನ್ನುವುದಕ್ಕೆ ಮತ್ತು ಕೆಲ ಕೆಲವು ಇರಾಬ್ಜಗಳಲ್ಲಿ ಸರಿಯಾದ ವೇತನವಿಲ್ಲದಿದ್ದರೆ ಅದನ್ನು ಪರೀಕ್ಷಿಸಿ ಯಾವ ರೀತಿ ರಿವಿಜನ್ನು ಮಾಡಬಹುದು ಎನ್ನುವುದನ್ನು ನೋಡಿ ಸರಕಾರಕ್ಕೆ ಸಿಫಾರಸು ಮಾಡುವುದಕ್ಕಾಗಿ ಮಾಡಲಾಗಿದೆ.

ಶ್ರೀ ಜಿ. ವಿ. ಗೌಡ.—ಈ ಹೇ ಕಮಿಟಿಯವರು ಯಾವಾಗ ಅವರ ವರದಿಯನ್ನು ಕೊಡಬೇಕು ಎಂದು ಕಾಲವನ್ನು ನಿಗದಿ ಮಾಡಿರಲಿಲ್ಲವೆ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಕಮಿಟಿ ಮಾಡಿದ ಆರು ತಿಂಗಳೊಳಗಾಗಿ ವರದಿ ಸಲ್ಲಿಸಬೇಕೆಂದು ಮಾಡಲಾಗಿತ್ತು.

ಶ್ರೀ ಎಸ್. ಎಂ. ಕೃಷ್ಣ.—ಈ ಕಮಿಟಿ ಯಾವಾಗ ನೇಮಕ ಮಾಡಿದಿರಿ ?

ಶ್ರೀ ರಾಮಕೃಷ್ಣ ಹೆಗಡೆ.—1965ನೇ ಮೇ ತಿಂಗಳಿನಲ್ಲಿ.

ಶ್ರೀ ಹೆಚ್. ಆರ್. ಕೇಶವಮೂರ್ತಿ.—ಸೆಂಟ್ರಲ್ ಗವರ್ನಮೆಂಟಿನವರು ಈಚೆಗೆ ಡಿ. ಎ. ಯನ್ನು ಜಾಸ್ತಿ ಮಾಡಿರುವುದರಿಂದ ನಮ್ಮ ಸರಕಾರದಲ್ಲಿರುವ ನೌಕರರುಗಳಿಗೆ ಜಾಸ್ತಿ ಮಾಡದೆ ಇರುವುದರಿಂದ ಇದರ ಸೈಕಲಾಜಿಕರ್ ಎಫೆಕ್ಟ್‌ನಿಂದಾಗಿ ಕೆಲಸ ಮಾಡುವುದರಲ್ಲಿ ಒಂದು ರೀತಿಯ ಅನಹಕಾರ ಮನೋಭಾವ ಬರಲು ಕಾರಣವಾಗುವುದಿಲ್ಲವೆ ? ಅದನ್ನು ತಪ್ಪಿಸಲಿಕ್ಕೆ ಸರಕಾರ ಪ್ರಯತ್ನ ಮಾಡಬೇಡವೇ ?

Sri RAMAKRISHNA HEGDE.—It is a matter of opinion. It has financial implication. Therefore, Government have to be very carefull before they take any decision.

ಶ್ರೀಮತಿ ಸುಶೀಲಾಬಾಯಿ ಪಿರಾಚಂದ್‌ಷಾ.—ಈ ಹೇ ಕಮಿಟಿ ರಿಪೋರ್ಟು ಬರದೇ ಇರುವುದರಿಂದ ಇಲ್ಲಿ ಕೆಲಸ ಮಾಡುತ್ತಿರುವ ಕೆಲವು ವೈದ್ಯರುಗಳಿಗೆ ಅದರಲ್ಲೂ ಡಬ್ಬಲ್ ಗ್ರಾಜುಯೇಟು ಗಳಾಗಿರುವುವವರಿಗೆ ತೊಂದರೆಯಾಗುತ್ತಿದೆ. ಇವನ್ನು ಅದಷ್ಟು ಮಟ್ಟಿಗೆ ತಪ್ಪಿಸುವುದಕ್ಕೆ ಸರಕಾರಕ್ಕೆ ಆಗುವುದಿಲ್ಲವೇ ?

Sri RAMAKRISHNA HEGDE.—The terms of reference of this committee are mainly two. One is to examine and make suitable recommendations regarding revision of pay scales and secondly the Committee was also required to look into the question of reduction of staff wherever necessary. These two things will have to be dealt with simultaneously and, therefore, it will take some time.

Mr. SPEAKER.—Has the time been extended ?

Sri RAMAKRISHNA HEGDE.—The time is extended from time to time.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ವೈದ್ಯರುಗಳಿಗೆ ಸಂಬಳ ಅಲ್ಲದೆ ಕನ್‌ಸಲ್ಟೇಷನ್ನು ಫೀ ಹಾಗೂ ಇನ್ನಿತರ ಇನ್‌ಕಂ ಎಂದು ಬರುತ್ತಿರುವುದರಿಂದ ಅವರಿಗೆ ಹೆಚ್ಚಿಗೆ ಸಂಬಳ ಕೊಡದೆ ಇದ್ದರೂ ಅದರಿಂದೇನೂ ಅನಾನುಕೂಲವಾಗುವುದಿಲ್ಲ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಅದು ಮಾನ್ಯ ಸದಸ್ಯರ ಅಭಿಪ್ರಾಯ. ಸಂಬಳ ಗಿಂಬಳ ಎಲ್ಲ ಸೇರಿಸಿ ಎಷ್ಟು ಬರುತ್ತೆ ಎನ್ನುವುದು ನನಗೆ ಗೊತ್ತಿಲ್ಲ.

Sri C. J. MUCKANNAPPA.—Will this Committee go into the details of all the employees of the State Government or will it go only into the merits and demerits of the N.G.O.s ?

Sri RAMAKRISHNA HEGDE.—The Committee was expected to make its recommendation in regard to Government staff.

Sri S. RAJAGOPAL.—Even though the time limit fixed was 6 months the Committee was not able to submit its report within that time. May I know the reason for the dalay ?

Sri RAMAKRISHNA HEGDE.—I have already stated that.

ಶ್ರೀ ಹೆಚ್. ಆರ್. ಕೇಶವಮೂರ್ತಿ.—ಸರಕಾರಕ್ಕೆ ಇನ್ನೂ ಈ ಪೇ ಕಮಿಟಿ ರಿಪೋರ್ಟು ಬಂದಿಲ್ಲ. ಆದುದರಿಂದ ಈಗ ಈ ಕಮಿಟಿಯವರು ಮಾಡತಕ್ಕ ಪೇ ಸ್ಕೇಲ್‌ಗಳು ಸೆಂಟ್ರಲ್ ಸ್ಕೇಲ್ಸ್ ಗಳಿಗೆ ಸರಿಹೋಗುವಂತೆ ಮಾಡಲು ಪ್ರಯತ್ನ ಮಾಡಬೇಕು. ಇಲ್ಲವೇ ಇದ್ದರೆ ಸರಕಾರಿ ನೌಕರರಲ್ಲಿ ಒಂದು ರೀತಿಯಾಗಿ ಡಿಸ್‌ಕ್ರಿಮಿನೇಷನ್ನನ್ನು ಕ್ರಿಯೇಟ್ ಮಾಡಿದಂತಾಗುತ್ತದೆ ಮತ್ತು ದಕ್ಷತೆಯಿಂದ ಸಲೀಸಾಗಿ ಕೆಲಸಗಳೂ ಆಗುವುದಿಲ್ಲ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ?

Sri RAMAKRISHNA HEGDE.—I have made it clear on a previous occasion on that whenever the Central Government revises the pay scales of its employees it is not possible for the State Governments to follow suit. This matter was discussed recently in a conference of Chief Ministers and it was very emphatically stated that before the Central Government takes any decision in the matter, the State Governments must also not only be consulted, but the necessary financial help also has to be given by the Central Government. Therefore, this is a matter in which we cannot take a decision very soon.

Sri S. M. KRISHNA.—Did the Central Government give an assurance to the State Chief Ministers that whenever they revise the scales of pay of Central Government employees, they would also step in to the aid of the State Governments so that they can revise the pay scales of their employees ?

Sri S. NIJALINGAPPA (Chief Minister).—That is a request made to the Central Government and the State Governments feel certain that the Central Government will come to their help.

ಶ್ರೀ ಎಸ್. ಗೋಪಾಲಗೌಡ.—ಕಳೆದ ಅನೇಕ ತಿಂಗಳುಗಳಿಂದ ರಾಜ್ಯದ ಎನ್.ಜಿ.ಓ. ಗಳು ಕೆಲವು ಬೇಡಿಕೆಗಳನ್ನು ಸರ್ಕಾರದ ಮುಂದೆ ಇಟ್ಟು ಆಂಧೋಲನ ಮಾಡುತ್ತಾ ಇರುವುದರಿಂದ ಅವರ ಬೇಡಿಕೆಗಳನ್ನು ಆದಷ್ಟು ಬೇಗ ಈಡೇರಿಸಿ ಸರ್ಕಾರದ ಕೆಲಸಕಾರ್ಯಗಳು ನುಗುತ್ತವಾಗಿ ನಡೆಯುವಂತೆ ಸರ್ಕಾರದವರು ಏನಾದರೂ ಏರ್ಪಾಡು ಮಾಡುತ್ತಾರೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಇದಕ್ಕೂ ಸರ್ಕಾರದ ಕೆಲಸಕಾರ್ಯಗಳು ನುಗಮವಾಗಿ ನಡೆಯುವುದಕ್ಕೂ ಸಂಬಂಧವಿದೆ ಎಂದು ಹೇಳುವುದನ್ನು ನಾನು ಒಪ್ಪುವುದಿಲ್ಲ. ಆಗಲೇ ಹೇಳಿದೆ, 1956ನೇ ಇಸವಿ ನಂತರ ಎರಡು ಸಲ ವೇತನದ ಪುನರ್‌ಮರ್ಕ್ ಮಾಡಿದ್ದೇವೆ 1957ನೇ ಇಸವಿಯಲ್ಲಿ ಮತ್ತು 1961ನೇ ಇಸವಿಯಲ್ಲಿ. ಅದಾಗಲೇ ತುಟ್ಟಿಭತ್ಯ ಮತ್ತು ಇನ್ನಿತರ ಭತ್ಯಗಳ ವಿಚಾರದಲ್ಲಿ ಸರ್ಕಾರದವರು 1963ರಲ್ಲಿ, 1964ರಲ್ಲಿ, 1965ರಲ್ಲಿ ಹೀಗೆ ಮೂರು ಬಾರಿ ಪುನರ್‌ಮರ್ಕ್ ಮಾಡಿ ಹೆಚ್ಚು ತುಟ್ಟಿಭತ್ಯವನ್ನು ಆಗಾಗ ಕೊಡುತ್ತಾ ಬಂದಿದ್ದಾರೆ. ಸರ್ಕಾರದ ಉತ್ಪನ್ನ ಮತ್ತು ಸಿಬ್ಬಂದಿಗೆ ಆಗತಕ್ಕ ವೆಚ್ಚ ಇವೆರಡರಲ್ಲಿ ಸ್ವಲ್ಪ ಮಟ್ಟಿಗೆ ಆದರೂ ಒಂದು ತರಹದ ಸಾಮರಸ್ಯ ಇರಬೇಕು, ವಿಪರೀತವಾಗಿ ಖರ್ಚು ಹೆಚ್ಚು ಮಾಡಿಕೊಂಡು ಹೋದರೆ ಸರ್ಕಾರ ನಹಿಸುವುದಕ್ಕೆ ಸಾಧ್ಯವಾಗುವುದಿಲ್ಲ.

Sri C. J. MUCKANNAPPA.—Do you expect any help from the Government of India for enhancing the pay scales of the State employees?

Sri RAMAKRISHNA HEGDE.—These matters are always taken into consideration by the Finance Commission which is appointed once in five years and the Finance Commission is expected to take into consideration the State Government's commitments in regard to the revenue expenditure and I must say that the Finance Commission which submitted the report recently has taken into consideration the State

Government's commitments, but in the middle if we again revise the pay scales or dearness allowance, the Government of India is not bound to come to the help of State Governments.

ಶ್ರೀ ಸಿದ್ದಯ್ಯ ಕಾಶೀಮಠ.—ಈ ಪೇ ಕಮಿಷನ್ ರಿಪೋರ್ಟ್ ತಡವಾಗಿ ಬರುತ್ತಾ ಇರುವುದರಿಂದ ಈಗಿನ ಜೀವನ ಮಟ್ಟಕ್ಕೆ ಸರಿಯಾಗಿ ನೌಕರವರ್ಗದವರಿಗೆ ತುಟ್ಟಿ ಭತ್ಯ ಹೆಚ್ಚುಮಾಡುವುದಕ್ಕೆ ನಿರ್ಣಯ ತೆಗೆದು ಕೊಂಡಿದ್ದೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಈ ವಿಚಾರ ಮೊನ್ನೆ ಮುಖ್ಯ ಮಂತ್ರಿಗಳ ಸಭೆ ಆದಮೇಲೆ ಕೇಂದ್ರಸರ್ಕಾರದ ಗಮನದಲ್ಲಿ ಬಹಳ ತೀವ್ರವಾಗಿ ಇದೆ. ಕೇಂದ್ರ ಸರ್ಕಾರದವರು ಯಾವ ಒಂದು ನೀತಿಯನ್ನು ಅನುಸರಿಸುತ್ತಾ ಇದ್ದಾರೆಯೋ ಆ ನೀತಿಯೂ ಕೂಡ ಅಷ್ಟೊಂದು ಸಮರ್ಪಕವಾಗಿಲ್ಲ ಎಂಬುದನ್ನು ನಾವು ಒಪ್ಪಬೇಕು, ಲಿವಿಂಗ್ ಇಂಡೆಕ್ಸ್ ಮತ್ತು ತುಟ್ಟಿಭತ್ಯದ ಪ್ರಮಾಣ ಇವೆರಡೂ ಸರಿಯಾದ ರೀತಿಯಲ್ಲಿ ಇಡಬೇಕೆನ್ನುವುದನ್ನು ನಾವು ಒಪ್ಪಿಕೊಂಡು ಅದೇ ಪ್ರಕಾರ ಹೋಗುವಂಥದಕ್ಕೆ ಸಾಧ್ಯವಾಗುವುದಿಲ್ಲ ಅವರಿಂದ ಬೇರೆ ಬೇರೆ ತರಹದ ಸಮಸ್ಯೆಗಳು ಹುಟ್ಟುತ್ತವೆ. ಆದ್ದರಿಂದ ಈ ಸರ್ಕಾರದ ನೌಕರರಿಗೆ ಬೇರೆ ರೀತಿಯಲ್ಲಿ ಯಾವುದಾದರೂ ರೀತಿಯಿಂದ ಪರಿಹಾರಗಳನ್ನು ಕೊಡುವಂಥದಕ್ಕೆ ಸಾಧ್ಯವೇ ಎಂದು ಹೇಳುವುದನ್ನು ಕೇಂದ್ರಸರ್ಕಾರದವರು ವಿಚಾರ ಮಾಡುತ್ತಾ ಇದ್ದಾರೆ

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಸರ್ಕಾರಿ ನೌಕರರ ಸಂಬಳ ಹೆಚ್ಚು ಮಾಡಬೇಕೆನ್ನುವುದರ ಜೊತೆಯಲ್ಲೆ ರಾಜ್ಯದ ಸಾಮಾನ್ಯ ಜನರ ಅಥವಾ ರೈತ ಜನರ ಆರ್ಥಿಕ ಮಟ್ಟವನ್ನೂ ಸಹ ಲಕ್ಷ್ಯಕ್ಕೆ ತೆಗೆದು ಕೊಳ್ಳುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಸರ್ಕಾರ ಇರುವುದೇ ಆ ಕೆಲಸಕ್ಕೆ.

ಶ್ರೀ ಎಸ್. ಶಿವಪ್ಪ.—ಕೇಂದ್ರಸರ್ಕಾರದವರು ತಮ್ಮ ನೌಕರರಿಗೆ ಕಳೆದ 3 ವರ್ಷಗಳಿಂದೀಚೆಗೆ 6 ಬಾರಿ ತುಟ್ಟಿ ಭತ್ಯ, ಸಂಬಳದ ಏರಿಕೆಯನ್ನು ಮಾಡಿದ್ದಾರೆ, ಜೀವನದ ವೆಚ್ಚದ ಅಂಶದ ಏರಿಕೆ ಬೆಂಗಳೂರು ನಗರದಲ್ಲಿ ಕೇಂದ್ರನೌಕರರಿಗೆ ಆಗಲಿ ಅಥವಾ ನಮ್ಮ ಸರ್ಕಾರದ ನೌಕರರಿಗೆ ಆಗಲಿ ಇಬ್ಬರಿಗೂ ಕೂಡ ಒಂದೇ ರೀತಿಯಲ್ಲಿ ಏರಿಕೆ ಇರುವುದರಿಂದ ತಾವೂ ಕೂಡ ಬೆಲೆ ಏರಿಕೆ ಸಮನ್ವಯದಿಂದ, ಈ ಸಂಬಳದ ಏರಿಕೆಯನ್ನು ಮಾಡುವುದು ದೇಶೀಯ ಸರ್ಕಾರದ ಕರ್ತವ್ಯವಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ಕರ್ತವ್ಯ ಅಂತ ಒಪ್ಪುವುದಿಲ್ಲ. ಆದರೆ ಅದರಿಂದ ಒಂದು ರೀತಿಯ ಮಾನಸಿಕ ಅಸಮಾಧಾನ ಆಗಿಯೇ ಆಗುತ್ತದೆ ಅದನ್ನು ಒಪ್ಪಬೇಕಾಗುತ್ತದೆ. ಈ ದಿವಸ ಆಗಲೇ ಹೇಳಿದ ಹಾಗೆ, ಕೇಂದ್ರ ಸರ್ಕಾರದ ನೌಕರರು ಬೆಂಗಳೂರಿನಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಇದ್ದಾರೆ, ಅವರ ತುಟ್ಟಿ ಭತ್ಯದ ಪ್ರಮಾಣದಲ್ಲಿ ಹೆಚ್ಚಾದರೆ ಆವರಿಗೆ ಪರ್ಚೇಸಿಂಗ್ ಪವರ್ ಹೆಚ್ಚಾಗುತ್ತದೆ, ಅವರಂತೆ ಮಾರ್ಕೆಟ್‌ನಲ್ಲಿ ಸಾಮಗ್ರಿಗಳ ದಾರಣಿಯೂ ಕೂಡ ಹೆಚ್ಚಾಗುತ್ತದೆ. ಅಷ್ಟೇ ಪ್ರಮಾಣದಲ್ಲಿ ನಮ್ಮ ಸರ್ಕಾರದ ನೌಕರರಿಗೂ ಮಾಡದೇಹೋದ ಪಕ್ಷದಲ್ಲಿ ನಮ್ಮ ನೌಕರರು ಕಡಿಮೆ ಪರ್ಚೇಸಿಂಗ್ ಪವರಿಗೆ ತುತ್ತಾಗಿ ತೊಂದರೆಗೆ ಈಡಾಗುತ್ತಾರೆ. ಈ ಸಮಸ್ಯೆ ಬಹಳ ಜಟಿಲವಾದ ಸಮಸ್ಯೆಯಾದ್ದರಿಂದ ಕೇಂದ್ರಸರ್ಕಾರದವರು ಇದನ್ನು ಬಿಡಿಸುತ್ತಾರೆ ಎಂದು ನಾನು ನಂಬಿರುತ್ತೇನೆ.

ಶ್ರೀ ಜಿ. ಪಿ. ಗೌಡ.—ಹೈ ಕೋರ್ಟ್ ನ್ಯಾಯಾಧೀಶರ ನೇತೃತ್ವದಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿ ಎಲ್ಲಾ ವಿಚಾರವನ್ನೂ ಪುನರ್ವಿಮರ್ಶೆ ಮಾಡಬೇಕೆಂದು ನಮ್ಮ ನೌಕರರು ಇಟ್ಟಿರುವ ಬೇಡಿಕೆಯನ್ನು ಪರಿಶೀಲನೆ ಮಾಡಿದ್ದೀರಾ ಮತ್ತು ಅದಕ್ಕೆ ಒಪ್ಪಿದ್ದೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಇಲ್ಲ ಅವನ್ನು ಒಪ್ಪಿಲ್ಲ, ಒಪ್ಪುವುದೂ ಸಾಧ್ಯವಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಮೊದಲು ರಾಜ್ಯದ ಎನ್. ಜಿ. ಓಗಳು ಕೇಳಿದಾಗ ಮದರಾಸಿನ ತುಟ್ಟಿ ಭತ್ಯ, ಸ್ಕೇಲ್ ಕೊಡುತ್ತೇವೆ ಎಂದು ಹೇಳಿದಿರಿ, ಅದರಂತೆಯೇ ಕೊಟ್ಟುಬಿಟ್ಟಿರಿ. ಮೊದಲು ಕೇಂದ್ರ ಸರ್ಕಾರದ ನೌಕರರಿಗೂ ರಾಜ್ಯ ಸರ್ಕಾರದ ನೌಕರರಿಗೂ ಇದ್ದ ವ್ಯತ್ಯಾಸ ಕಡಿಮೆಯಾಗಿದ್ದುದು ಈಗ ಕೇಂದ್ರ ಸರ್ಕಾರದವರು ಪುನಃ ಏರಿಸಿದ್ದರಿಂದ ಇನ್ನಷ್ಟು ವ್ಯತ್ಯಾಸ ಹೆಚ್ಚಾಗಿದೆ, ಈ ಎಲ್ಲಾ ಕಾರಣದಿಂದ ಜೀವನದ ವೆಚ್ಚ ಹಾಗೂ ವಸ್ತುಗಳ ಬೆಲೆ ಈಗ ಏರಿರುವುದನ್ನು ಗಮನಿಸಿ ರಾಜ್ಯದ ಎನ್. ಜಿ. ಓಗಳ ಬೇಡಿಕೆಯನ್ನು ರಾಜ್ಯಸರ್ಕಾರದವರು ತೀವ್ರವಾಗಿ ಪರಿಶೀಲನೆ ಮಾಡುತ್ತಾರೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಕೇಂದ್ರ ಸರ್ಕಾರದ ನೌಕರರ ತುಟ್ಟಿ ಭತ್ಯದ ಪ್ರಮಾಣ ಮತ್ತು ನಮ್ಮ ಸರ್ಕಾರದ ನೌಕರರ ತುಟ್ಟಿಭತ್ಯದ ಪ್ರಮಾಣ ಒಂದೇ ರೀತಿಯದಾಗಿದೆ. ಅರ್ಥಾತ್ ಈಗ ನಮ್ಯದಲ್ಲಿ ಕೆಲವು ದಿವಸಗಳ ಹಿಂದೆ ಕೇಂದ್ರ ಸರ್ಕಾರದವರು ಯಾವುದನ್ನು ಹೆಚ್ಚು ಮಾಡಿದರು ಅದ

(ಶ್ರೀ ರಾಮಕೃಷ್ಣ ಹೆಗಡೆ)

ಕ್ಕಿಂತ ಮೊದಲು ಕೇಂದ್ರಸರ್ಕಾರದ ನೌಕರರ ತುಟ್ಟಿ ಭತ್ಯದ ಪ್ರಮಾಣ ಎಷ್ಟಿತ್ತೊ ಅಷ್ಟೇ ನಮ್ಮದೂ ಆಗಿತ್ತು. ನಮ್ಮ ಪಕ್ಕದ ರಾಜ್ಯವಾದ ಆಂಧ್ರದಲ್ಲಿ ಯಾವ ಪ್ರಮಾಣದಲ್ಲಿ ಇವತ್ತು ನಮ್ಮಲ್ಲಿ ಇದೆಯೋ ಅದಕ್ಕಿಂತ ಕಡಿಮೆ ದರದಲ್ಲಿ ಅವರು ಕೊಡುತ್ತಾ ಇದ್ದಾರೆ. ಆದ್ದರಿಂದ ಕೇಂದ್ರಸರ್ಕಾರ ದವರು ಹೆಚ್ಚು ಮಾಡಿದರು ಅಂದ ಮಾತ್ರಕ್ಕೆ ಅದನ್ನೇ ನಾವು ಒಪ್ಪಿ ಹೆಚ್ಚಿಸುವಂಥದು ಸಾಧ್ಯವಾಗು ವುದಿಲ್ಲ, ಹೆಚ್ಚು ಮಾಡಿದರೆ ಕೋಟ್ಯಾಂತರ ರೂಪಾಯಿಗಳನ್ನು ನಾವು ಖರ್ಚು ಮಾಡಬೇಕಾಗುತ್ತದೆ.

Election of the Agricultural Produce Market Committee.

*Q.—26. Sri K. P. GADAG (Gadag).—

Will the Government be pleased to state :—

(*a*) whether the election of the Agricultural Produce Market Committee of Gadag Market Yard was due to be held about a year baek ;

(*b*) if so, why it was not held ?

A.—Sri K. PUTTASWAMY (Minister for Co-operation and Housing).—

(*a*) Yes.

(*b*) Timely action was taken for holding the election of the Market Committee, Gadag, after the expiry of the date and the Assistant Commissioner, Gadag, published the voters list. The voters list was challenged in the High Court through writ petitions. As such the election could not be held in time.

Sri K. P. GADAG.—When were these writ petitions filed.

Sri K. PUTTASWAMY.—In the year 1964.

Sri K. P. GADAG.—Have the judgements been delivered on these writ petitions ?

Sri K. PUTTASWAMY.—Not as yet.

Sri K. P. GADAG.—Since it is a long time, will the Government expedite the judgements ?

Mr. SPEAKER.—How can Government do that ?

Sri K. PUTTASWAMY.—The pendency of these writ petitions is not coming in the way of reconstituting the Market Committee and we have issued instructions to the Deputy Commissioner to go ahead with the elections.

ಶ್ರೀ ಸಿದ್ದಯ್ಯ ಕಾಶಿಮಠ.—ಬೊಂಬಾಯಿ ಕರ್ನಾಟಕದಲ್ಲಿರತಕ್ಕ ಈ ಅಗ್ರಿಕಲ್‌ಚರಲ್ ಪ್ರಾಡ್ಯೂಸ್ ಮಾರ್ಕೆಟಿಂಗ್ ಕಮಿಟಿ ಎಲೆಕ್ಷನ್ ಹತ್ತು ವರ್ಷದಿಂದ ಆಗಿಲ್ಲ. ಅದಕ್ಕೆ ಕಾರ್ಯಕ್ರಮ ತೆಗೆದುಕೊಂಡು ತೀರ್ವ್ರ ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಇದು ಬಹಳ ಜನರಲ್ ಪ್ರಶ್ನೆಯಾಯಿತು. ಹೊಸ ಆಕ್ಟ್ ಸೆರೆಕ್ಟ್ ಕಮಿಟಿ ಮುಂದೆ ಇದೆ. ಅದು ಸಭೆಯ ಮುಂದೆ ಬರುತ್ತದೆ, ಅದು ಅಂಗೀಕೃತವಾದ ಮೇಲೆ ಕಾರ್ಯ ಕ್ರಮ ತೆಗೆದುಕೊಳ್ಳುತ್ತೇವೆ.